ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆದ ಆದಾಯ ಕರ ಮತ್ತು ಅಬ್ಕಾರಿ ಸುಂಕ ಹಾಗೂ ರಾಜ್ಯದ ಒಟ್ಟು ಆದಾಯದಲ್ಲಿ ಅದರ ಪ್ರತಿಶತ ಪ್ರಮಾಣದ ವಿವರ ಈ ಕೆಳಗೆ ಕಾಣಿಸಿದಂತಿದೆ.—

(ಕೋಟಿ ರೂ.ಗಳಲ್ಲಿ)

	೧೯೮೬–೮೭ ಲೆಕ್ಕ	೧೯೮೭–೮೮ ಪರಿಷ್ಕೃತ ಅಂದಾಜು	೧೯೮೮–೮೯ ಬಜೆಟ್ ಅಂದಾಜು
ಆದಾಯ ಕರ	೧೦೭.೫೫	೧೨೮.೩೮	೧೪೨.೦೯
	(೩.೨೩%)	(೩.೨೯%)	(೩.೩೧%)
ಅಬ್ಕಾರಿ ಸುಂಕ	೨೩೫.೮೩	೨೫೪.೯೦	೨೮೨.೪೬
	(೭.೦೯%)	(೬.೫೪%)	(೬.೫೯%)
ಹೆಚ್ಚುವರಿ ಅಬ್ಕಾರಿ ಸುಂಕ	೫೯.೪೮	೬೬.೬೩	೭೩.೬೧
	(೧.೭೯%)	(೧.೭೧%)	(೧.೭೨%)
ರಾಜ್ಯದ ಒಟ್ಟು ಆದಾಯ	೩೩೨೪.೭೭	೩೮೯೫.೨೦	೪೨೮೮.೦೨
	(೧೦೦%)	(೧೦೦%)	(೧೦೦%)

ಆ) —ಇಲ್ಲ—

ಇ) '' (ಅ)' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಪಂ. ವೀರಣ್ಣ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ

ಪೋಲೀಸರ ಸಮಲತ್ತು ಕುರಿತಂ

೧೪೭೭. ಶ್ರೀ ಗೋಪಾಲ ಮುಕುಂದ ಕಾಸರ್ಡೆ(ಸಿರ್ಸಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೫ರಿಂದ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಬಟ್ಟೆ ಹಾಗೂ ಪೋಲೀಸರಿಗೆ ಅವಶ್ಯಕತೆ ಇರುವ ವಸ್ತುಗಳಿಗೆ ವಿಧಿಸಿರುವ ಹಣವೆಷ್ಟು ?

ಆ) ಆ ಪೈಕಿ ಒಬ್ಬ ಪೋಲೀಸ್ ಪೇದೆಗೆ ವರ್ಷ ಒಂದಕ್ಕೆ ತಗಲುವ ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಕರ್ನಾಟಕ ರಾಜ್ಯದ ಪೋಲೀಸ್ ಸಿಬ್ಬಂದಿಯವರಿಗೆ ೧೯೮೫–೮೬ನೇ ಸಾಲಿನಲ್ಲಿ ಸಮವಸ್ತ್ರಗಳನ್ನು ಖರೀದಿಸಲು ೧,೮೨,೭೪,೦೦೦–೦೦ ರೂ.ಗಳು ವಿಚಾರಗಿದೆ.

ಆ) ಸಂಮಾರು ೪೧೮–೦೦ ರೂ. ಗಳು